ಮೇಲೆ ೧೯೮೪-೮೫, ೧೯೮೫-೮೬ನೇ ಸಾಲಿನಲ್ಲಿ ವಸೂಲಿ ಆದ ನಿಯಂತ್ರಿತ ಮಾರುಕಟ್ಟೆ ಶುಲ್ಕ ಎಷ್ಟು ಹಾಗೂ ಮಾರಾಟವಾದ ಗೇರು ಬೀಜದ ಪ್ರಮಾಣ ಎಷ್ಟು?

ಆ) ಆದೇ ಅವಧಿಯಲ್ಲಿ ಮಾರಾಟ ಶುಲ್ಕ ಸೇಲ್ಸ್ ಟ್ಯಾಕ್ಸ್ ವಸೂಲಿ ಎಷ್ಟೋ ಹೆಚ್ಚಿಗೆ ಆಗಿದ್ದು ಪ್ರಮಾಣವೂ ಅಧಿಕ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಇ) ನಿಯಂತ್ರಿತ ಮಾರುಕಟ್ಟೆ ಶುಲ್ಕ ಸೋರಿ ಹೋಗದಂತೆ ಯಾವ ಕ್ರಮ ಕೈಗೊಳ್ಳ ಆಗಿದೆಯೆ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಮಾರಾಟವಾದ ಗೇರು ಬೀಜದ ಪ್ರಮಾಣ ಹಾಗೂ ವಸೂಲಿ ಆದ ಮಾರುಕಟ್ಟೆ ಶುಲ್ಕ ಈ ರೀತಿ ಇವೆ.

	ಮಾರಾಟವಾದ ಗೇರು ಬೀಜ	ವಸೂಲಾದ ಮಾರುಕಟ್ಟೆ ಶುಲ್ಕ
(ಜುಲೈ ಇಂದ ಜೂನ್)		
೧೯೮೪-೮೫	೫೪,೦೩೭ ಕ್ವಿ	೪,೬೦,೬೫೯-೭೯
೧೯೮೫-೮೬	೭೯,೮೭೦ ಕ್ವಿ	೮,೭೧,೫೪೩-೬೪

ಆ) ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ಮಂಗಳೂರು ಇದರಲ್ಲಿ ಗೇರು ಬೀಜದ ಮೇಲೆ ವಸೂಲಾದ ಮಾರಾಟ ತೆರಿಗೆಯ ಅಂಕಿ ಅಂಶಗಳು ಈ ಕೂಡಲೇ ಲಭ್ಯವಿಲ್ಲ. ಆದರೂ ಕೂಡ, ಗೇರು ಬೀಜವು ವಿವಿಧ ಕಡೆಯ ಹಾಗೂ ಇತರ ರೀತಿಯ ಮಾರಾಟ ತೆರಿಗೆಗಳಿಂದ ತೊಂದರೆ ಅನುಭವಿಸುತ್ತಿದೆ ಮೇತ್ತು ಮಾರಾಟ ತೆರಿಗೆಯ ದರವು ಮಾರುಕಟ್ಟೆ ಶುಲ್ಕಕ್ಕಿಂತ ಭಿನ್ನವಾಗಿರುತ್ತದೆ ಎಂದು ತಿಳಿದು ಬಂದಿದೆ. ಆದಕಾರಣ ಮಾರಾಟ ತೆರಿಗೆಯ ಅಂಕಿ ಅಂಶಗಳನ್ನು ಮಾರುಕಟ್ಟೆ ಶುಲ್ಕದೊಡನೆ ಹೋಲಿಸಲು ಸಾಧ್ಯವಾಗುವುದಿಲ್ಲ.

ಇ) ೧೯೮೫-೮೬ ರಲ್ಲಿ ಹೆಚ್ಚಿನ ಮಾರ್ಕೆಟ್ ಫೀ ವಸೂಲಾಗಿರುವುದು ಸ್ಪಷ್ಟವಾಗಿದೆ. ಆದರೂ ಸಹ ಹರ್ತಕರ ಲೆಕ್ಕ ಪತ್ರಗಳನ್ನು ಆಗಾಗ್ಗೆ ತಪಾಸಣೆ ಮಾಡುವಂತೆ ಆದೇಶಗಳನ್ನು ಕೊಡಲಾಗಿದೆ.

ಮಂಗಳೂರು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯಿಂದ ಜಮೀನು ಸ್ವಾಧೀನದ ವಿಚಾರ

೧೦೧ (೬೫೫) ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮಂಗಳೂರು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯವರು ನಿರ್ಧರಿಸಿದಂತೆ ಸ್ಥಾಪಿಸಲಾಗುವ ಬೈಕಂಪಾಡಿಯ ಪ್ರಮುಖ ಮಾರುಕಟ್ಟೆ ಯಾರ್ಡಿಗೆ ಭೂ ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಕೈಕೊಂಡ ಕ್ರಮಗಳೇನು ?

ಆ) ಈ ತನಕ ಎಷ್ಟು ಜಮೀನು ಸಮಿತಿಯು ಸ್ವಾಧೀನಕ್ಕೆ ಬಂದಿದೆ ಹಾಗೂ ಎಷ್ಟು ಪರಿಹಾರ ಹಣ ಪಾವತಿ ಆಗಿದೆ?

ಇ) ಸ್ವಾಧೀನಕ್ಕೆ ಬರಲು ಬಾಕಿ ಇರುವ ಜಾಗ ಎಷ್ಟು ಹಾಗೂ ಸ್ವಾಧೀನ ಪಡಿಸಿಕೊಳ್ಳಲು ಇರುವ ತೊಂದರೆಯೇನು?

ಈ) ಸ್ವಾಧೀನಕ್ಕೆ ಬಂದ ಬಡ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆಯೇ, ಹಾಗಿದ್ದಲ್ಲಿ ಆದಕ್ಕೆ ತಗುಲಿದ ಹೆಚ್ಚ ಎಷ್ಟು ಹಾಗಿಲ್ಲದಿದ್ದಲ್ಲಿ ಆದಕ್ಕೆ ಕಾರಣವೇನು?

ಉ) ಸಮಿತಿಯ ಸ್ವಾಧೀನದಲ್ಲಿರುವ ಜಮೀನಿನಲ್ಲಿ ಕೆಲವರು ಮನೆ ಕಟ್ಟಿ ವೀಸಾಯ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಆದಕ್ಕೆ ಯಾರು ಅನುಮತಿ ನೀಡಿದ್ದಾರೆ ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಬೈಕಂಪಾಡಿಯಲ್ಲಿ ಮಾರುಕಟ್ಟೆ ಪ್ರಾಂಗಣವನ್ನು ನಿರ್ಮಿಸಲು ೮೫.೮೮ ಎಕರೆ ಜಮೀನನ್ನು ಪಡೆಯಲು ಭೂ ಸ್ವಾಧೀನ ಕಾಯ್ದೆಯ ನ್ವಯ ೧೯೭೧ ರಿಂದಲೂ ಪ್ರಯತ್ನಿಸುತ್ತಿದೆ.

ಆ) ೭೭.೯೫ ಎಕರ್ಸ್ ಜಮೀನು ಸಮಿತಿಯ ಸ್ವಾಧೀನಕ್ಕೆ ಬಂದಿದೆ. ಸಮಿತಿಯು ರೂ. ೨೩,೩೨,೪೭೭–ಳಳ ಪೈಸೆ ಹಣವನ್ನು ಪರಿಹಾರದ ಬಾಬ್ತಿಗೆ ಜಮಾ ಮಾಡಿದೆ.

ಇ) ಮಾರುಕಟ್ಟೆ ಸಮಿತಿಯು ಇನ್ನೂ ೭.೯೩ ಎಕರೆ ಜಮೀನನ್ನು ಹೊಂದಬೇಕಾಗಿದೆ. ಆ ಸದರಿ ಜಮೀನಿನಲ್ಲಿ ವಾಸಿಸುತ್ತಿರುವ ನಿವಾಸಿಗಳು ತಮಗೆ ಬದಲಿ ನಿವೇಶನಗಳನ್ನು ಬೈಕಂಪಾಡಿಯಲ್ಲಿಯೇ ಕೊಡಬೇಕೆಂಬ ವಾದ ಮಾಡುತ್ತಿರುವುದರಿಂದ ಮಾರುಕಟ್ಟೆ ಸಮಿತಿಯು ಪ್ರಸ್ತುತ ಜಮೀನನ್ನು ಪಡೆಯಲು ಈವರೆಗೂ ಸಾಧ್ಯವಾಗಿರುವುದಿಲ್ಲ.

ಈ) ಸಮಿತಿಯ ಸ್ವಾಧೀನಕ್ಕೆ ಬಂದ ಭೂಮಿಯು ಒಂದೇ ಕಡೆ ಇಲ್ಲದೆ ಇರುವುದರಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.

ಉ) ಸಮಿತಿಯ ವಶದಲ್ಲಿರುವ ಜಮೀನಿನಲ್ಲಿ ಯಾವುದೇ ಹೊಸ ಇಮಾರತನ್ನು ಕಟ್ಟಿರುವುದಿಲ್ಲ. ಉದ್ಭವಿಸುವುದಿಲ್ಲ.

ಗ್ರಾಮ ಲೆಕ್ಕಿಗರ ಸ್ಥಾನಗಳ ಭರ್ತಿ ಮಾಡಂವ ಬಗ್ಗೆ

೧೦೨ (೬) ಶ್ರೀ ಆರ್. ಮೆಂಕಟರಾಮಯ (ಮುಳಬಾಗಿಲು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಯಿಟ್ಟು ಉತ್ತರಿಸುವರೇ ;—

ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯತಿ ಗ್ರೂಪ್‌ಗಳೆಷ್ಟು, ಹಾಗೂ ಗ್ರಾಮ ಲೆಕ್ಕಿಗರು ಎಷ್ಟು?

ಆ) ಈಗ ಜಿಲ್ಲಾ ಪರಿಷತ್ತು ಮತ್ತು ಮಂಡಲಗಳ ಸ್ಥಾಪನೆಯಿಂದಾಗಿ ಇವರ ಸ್ಥಾನವಾನ ಬದಲಾಯಿಸುವುದಿಲ್ಲವೇ ?

ಇ) ಗ್ರಾಮಲೆಕ್ಕಿಗರ ಎಲ್ಲಾ ಸ್ಥಾನಗಳು ಭರ್ತಿಯಾಗಿವೆಯೆ ? ಖಾಲಿ ಹುದ್ದೆಯಿದ್ದಲ್ಲಿ ಎಷ್ಟಿವೆ ? (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಈ) ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಸರ್ಕಾರ ದವರು ತ್ವರಿತ ಕ್ರಮಗಳನ್ನು ಕೈಗೊಳ್ಳುವರೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ಗ್ರಾಮಪಂಚಾಯತಿಗಳ ಸಂಖ್ಯೆ ೮,೩೭೫ ಹಾಗೂ ಗ್ರಾಮಲೆಕ್ಕಿಗರ ಸಂಖ್ಯೆ ೮,೯೫೯.

ಆ) ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ಸ್ಥಾಪನೆಯಿಂದ ಗ್ರಾಮಲೆಕ್ಕಿಗರ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

ಇ) ಗ್ರಾಮಲೆಕ್ಕಿಗರ ಎಲ್ಲಾ ಸ್ಥಾನಗಳು ಭರ್ತಿಯಾಗಿಲ್ಲ. ೧,೩೭೧ ಹುದ್ದೆಗಳು ಖಾಲಿಯಿವೆ. ಜಿಲ್ಲಾವಾರು ಖಾಲಿ ಹುದ್ದೆಗಳ ಸಂಖ್ಯೆ. ಈ ಕೆಳಕಂಡಂತೆ ಇವೆ.

೧.	ಬೆಂಗಳೂರು	...	೫೮
೨.	ಬೆಳಗಾಂ	...	೯೫
೩.	ಬಳ್ಳಾರಿ	...	೪೭
೪.	ಬೀದರ್	...	೫೦
೫.	ಬಿಜಾಪುರ	...	೬೮